# ಹೆಣ್ಣಿನ ಲಿಪಿ

ಭಾಷೆಯ ವಿಷಯ ಬಂದಾಗ ಚರ್ಚೆಗಳು ಹಲವು ದಿಕ್ಕಿನೆಡೆಗೆ ಹೊರಳುತ್ತವೆ. ಭಾಷೆ ಕೊಡುವುದು, ವಚನ ನೀಡುವುದು, ಆಣೆ ಪ್ರಮಾಣ ಮಾಡುವುದು, ಹೀಗೆ ಅದು ಮುಂದುವರೆಯುತ್ತಾ ಹೋಗುತ್ತದೆ. ಕೊಡುವುದು, ನೀಡುವುದು, ಮಾಡುವುದು ಎನ್ನುವ ಈ ಪದಗಳನ್ನು ನಾವು ಕ್ರಿಯಾತ್ಮಕವಾಗಿಯೇ ಬಳಸುತ್ತಿರುತ್ತೇವೆ. 'ಕೊಟ್ಟ ಮಾತಿಗೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಎಂಬ ಗೋವಿನ ಹಾಡಿನಂತೆ ಮಾತಿಗೆ ನಾವು ಬದ್ಧ. ಪಶು, ಪಕ್ಷಿ, ಮಾನವನಾದಿಯಾಗಿ ತನ್ನ ಮಾತಿನ ಮೇಲೆ ನಡೆಯಬೇಕಾದ ಹಾದಿಯನ್ನು ಮೌಲ್ಯವನ್ನಾಗಿ ರೂಪಿಸಲಾಗಿದೆ. ವಚನಕಾರರು ಸಹ ನಡೆನುಡಿಗಳೊಂದಾದ ನಡಾವಳಿಯನ್ನು ಆದರ್ಶವನ್ನಾಗಿ ಪಾಲಿಸಿದವರು.

ಆದರೆ ಜಗತ್ತಿನಲ್ಲಿ ಹೆಣ್ಣಿಗೆಂದೇ ಇರುವ ಲಿಪಿಯ ಬಗ್ಗೆ ಅಷ್ಟಾಗಿ ಚರ್ಚೆಗಳು ನಡೆದಂತಿಲ್ಲ. ಸ್ತ್ರೀವಾದ ಕುರಿತಾದ ಚರ್ಚೆ ನಡೆದಾಗಲೆಲ್ಲ ಗಂಡುಭಾಷೆಯ, ಗಂಡು ನಡಾವಳಿಯ ಪ್ರಸ್ತಾಪ ಬರುತ್ತದೆ. ಹೆಣ್ಣುಭಾಷೆಯ, ನಡಾವಳಿಯ ಕುರಿತ ಮಾತುಕತೆಗಳು ಆರಂಭವಾಗುವುದೇ ಪರಂಪರೆಯಲ್ಲಿ ಅಡಗಿಸಿಟ್ಟ ಕಥನಗಳ ಹಿನ್ನೆಲೆಯಲ್ಲಿ.

ಪಿತೃಪ್ರಧಾನ ವ್ಯವಸ್ಥೆ ಜಗತ್ತಿನಾದ್ಯಂತ ಇದೆ. ಎಲ್ಲಾ ದೇಶಗಳ ಮಣ್ಣಿನಲ್ಲೂ 'ಸೀತೆ' ಎಂಬ ರೂಪಕ ಅಡಗಿದ್ದಾಳೆ. ಅವಳು ಮಣ್ಣಪದರದಿಂದ ವಿವಿಧ ದೇಶ, ಭಾಷೆ, ಸಂಸ್ಕೃತಿಗಳಲ್ಲಿ ನಿಧಾನವಾಗಿ ಎದ್ದು ಹೊರಬರುತ್ತಿದ್ದಾಳೆ.

'ಪತ್ರವನು ಬರೆಯಲೆಂದು ಕುಂಚವನು ಹಿಡಿದರೆ
ನನ್ನ ಕಂಗಳಿಂದ ಎರಡು ಹೊಳೆಗಳು ಹರಿಯಲಾರಂಭಿಸುತ್ತವೆ.
ನಾನು ಅನುಭವಿಸಿದ ಸಾವಿರಾರು ಕಷ್ಟಗಳು
ಯಾರಿಗೂ ತಿಳಿದಿಲ್ಲ.'

ಇದನ್ನು ಚೀನಾದ ಗ್ಲೋಬಲ್ ವಿಲೇಜ್ ರಾಯಭಾರಿಯಾದ ಪಿಸಾನಾ ಫೆರಾರಿ ಉಲ್ಲೇಖಿಸುತ್ತಾರೆ. ಈ ಸಾಲುಗಳು ಜಗತ್ತಿನಲ್ಲಿನ ಏಕೈಕ ಸ್ತ್ರೀಯರ ಲಿಪಿ ಎಂದು ಕರೆಸಿಕೊಂಡ 'ನುಶು' ಲಿಪಿಯಲ್ಲಿ ದೊರೆತಿವೆ. ಚೀನಾದ ಮಹಿಳೆಯರು ಪರಸ್ಪರರ ನೋವು ನಲಿವುಗಳನ್ನು ಆಪ್ತವಾಗಿ ಹಂಚಿಕೊಳ್ಳಲು ರೂಪಿಸಿಕೊಂಡ ಪುರುಷನರಿಯದ ಭಾಷೆಯಿದು. ದಕ್ಷಿಣ ಚೀನಾದ ಜಿಯಾಂಗ್ ಯಾಂಗ್ ಪ್ರದೇಶದ ಕೌಂಟಿಯ ಸಾಂಗ್ ಮನೆತನದವರಿಂದ ಸುಮಾರು 9ನೇ ಶತಮಾನದಲ್ಲಿ ಹುಟ್ಟಿದ ಭಾಷೆಯಿದು. ಈ ಭಾಷೆ ರಾಜಕುಟುಂಬದವರಿಂದಲೇ ಹುಟ್ಟಿದರೂ ಅದು ಹೆಚ್ಚು ಬಳಕೆಯಾದದ್ದು ಗ್ರಾಮೀಣ ಮಹಿಳೆಯರಿಂದ. ಯಾವುದೇ ದೇಶ, ಯಾವುದೇ ಮೂಲೆಯಲ್ಲಿದ್ದರೂ ಮಹಿಳೆ ಎರಡನೆಯ ವರ್ಗದವಳೇ ಆಗಿದ್ದಾಳೆ. ಅಕ್ಷರ, ಅಧಿಕಾರದಿಂದ ದೂರವೇ ಇರಿಸಲಾಗಿದ್ದ ಅವಳು ಅಸಹಾಯಕಳೂ ಅಧೀರಳೂ ಆಗಿದ್ದಾಗ ತನ್ನ ನೋವನ್ನು ತನ್ನ ಇತರ ಸಂಗಾತಿಗಳೊಂದಿಗೆ ಹಂಚಿಕೊಳ್ಳಕೊಳ್ಳಬೇಕಿತ್ತು. ಹೀಗಾಗಿ ತನ್ನದೇ ಆದ ಲಿಪಿಯೊಂದನ್ನು ಅವಳು ರೂಪಿಸಿಕೊಂಡಳು.

ಬಣ್ಣ ಮತ್ತು ಕುಂಚಗಳನ್ನು ಬಳಸಿ ಪತ್ರದ ರೀತಿಯಲ್ಲಿ ಬರೆಯುವ ಈ ಸಂದೇಶಗಳಿಗೆ ಕರವಸ್ತ್ರ, ಸ್ಕಾರ್ಫ್, ಅಲಂಕಾರಕ್ಕಾಗಿ ಬಳಸುವ ಉದ್ದುದ್ದ ವಸ್ತ್ರಗಳೇ ಕಾಗದಗಳಾಗಿದ್ದವು. ಚೀನೀ ಸಮಾಜದಲ್ಲಿ ಹೆಣ್ಣಿಗೆ ಮದುವೆಯಾದ ನಂತರ ತಾಯಿ ಮನೆಯ ಜೊತೆಗೆ ಸಂಬಂಧ ಹೆಚ್ಚು ಕಡಿಮೆ ಕಡಿದುಹೋಗುತ್ತಿತ್ತು. ಬೆಟ್ಟಗುಡ್ಡಗಳು ಆವರಿಸಿದ್ದ ಜಿಯಾಂಗ್ ಯಾಂಗ್ ಪ್ರದೇಶದಲ್ಲಿ ಪ್ರಯಾಣ ಸುಲಭ ಸಾಧ್ಯವಾಗಿರಲಿಲ್ಲ. ಹೀಗಾಗಿ ತಾವು ಬಿಟ್ಟುಬಂದ ತವರು ಮನೆ, ಗೆಳತಿಯರ ಜೊತೆಗೆ ಮಾತನಾಡಲು ಅವಕಾಶವಿಲ್ಲದಿದ್ದಾಗ ಈ ಪತ್ರಗಳು ಒಂದುಕಡೆಯಿಂದ ಇನ್ನೊಂದು ಕಡೆ ಓಡಾಡುತ್ತಿದ್ದವು. ಹೀಗೆ ಇತರ ಮಹಿಳೆಯರೊಂದಿಗೆ ಒಂದು ಸಮಾನಾಂತರವಾದ ಜಗತ್ತು ಸೃಷ್ಟಿಯಾಯಿತು.

ನುಶು ಲಿಪಿಯಲ್ಲಿ ಅಕ್ಷರಗಳನ್ನು ನಕಲು ಮಾಡುವುದರ ಮೂಲಕ ಬರೆಯುವುದನ್ನು ಕಲಿತ ಈ ಮಹಿಳೆಯರು ತಮ್ಮ ಕತೆ, ಕವಿತೆ, ಆತ್ಮಕಥನ, ಅನುಭವ ಕಥನಗಳನ್ನು ಬರೆಯಲಾರಂಭಿಸಿದರು. ಇವು ತಾಯಂದಿರಿಂದ ಮಕ್ಕಳಿಗೆ ಬಳುವಳಿಯಾಗಿ ಬಂದವು. ಸಂಚಿ ಹೊನ್ನಮ್ಮನ 'ಹದಿಬದೆಯ ಧರ್ಮ' ಹೆಣ್ಣು ಬದುಕಿನ ಧರ್ಮವನ್ನು ಗಂಡುದೃಷ್ಟಿಕೋನದಿಂದ ಬರೆಯಲಾಗಿದೆ ಎಂಬ ಚರ್ಚೆಯನ್ನು ನಾವು ಬಿಡುಬೀಸಾಗಿ ಮಾಡುತ್ತಲೇ ಬಂದಿದ್ದೇವೆ. ಪುರಾತನ ಚೀನೀ ಮಹಿಳೆಯರಲ್ಲೂ ಬಟ್ಟೆಗಳ ಪದರುಗಳನ್ನೇ ಪುಟವಾಗಿಸಿ 'ಸಂಚೋಶು' ಎಂಬ ಪುಟ್ಟ ಪುಸ್ತಕವನ್ನು ಸಿದ್ಧಮಾಡಿಕೊಳ್ಳುವ ಪದ್ಧತಿಯಿತ್ತು. ಮದುವೆಯಾಗಿ ಮೂರು ದಿನಕ್ಕೆ ಅತ್ತೆ ಮನೆಗೆ ಹೊರಟ ಮಗಳಿಗೆ ಈ ಪುಟ್ಟಪುಸ್ತಕವನ್ನು ಬಳುವಳಿಯಾಗಿ ಕೊಡಲಾಗುತ್ತಿತ್ತು. ಅದರಲ್ಲಿ ಗಂಡನ ಮನೆಯಲ್ಲಿ ಅವಳು ಹೇಗೆ ಬದುಕಬೇಕು ಎಂಬ ಬೋಧನೆ ಇರುತ್ತಿತ್ತು.

ಗಂಡನ ಮನೆಗೆ ಬಂದ ಅವಳು ಮನೆಯ ಒಳಗೇ ಉಳಿಯಬೇಕಾಯಿತು. ಆಗ ಸಮಾನದುಃಖಿಗಳಾದ ಅವರು ದೇವರ ಮುಂದೆ 'ದುಃಖದಲ್ಲಿ ಸುಖದಲ್ಲಿ ಸಹೋದರಿಯರಾದ ನಾವು ಯಾವಾಗಲೂ ಒಟ್ಟಿಗೆ ಇರುತ್ತೇವೆ ಮತ್ತು ಅನ್ಯೋನ್ಯವಾಗಿರುತ್ತೇವೆ. ಬೇಸರ ಮರೆಯಲು ಹಾಡುತ್ತೇವೆ, ಕುಣಿಯುತ್ತೇವೆ, ಸಂಕಟಗಳನ್ನು ಮರೆತು ಹಗುರಾಗುತ್ತೇವೆ' ಎಂದು ಪ್ರಮಾಣ ಮಾಡಿದರು. ಅಂತೆಯೇ ಗಂಡನ ಮನೆಯಲ್ಲಿ ತಮ್ಮ ಬದುಕನ್ನು ಸಹನೀಯವಾಗಿರಿಸಿಕೊಂಡರು. ಇವರನ್ನು 'ಆಣೆ ಇಟ್ಟ ಸಹೋದರಿಯರು' ಎನ್ನಲಾಗುತ್ತಿತ್ತು.

ಚೀನಾದಲ್ಲಿ ನಡೆದ ಸಾಂಸ್ಕೃತಿಕ ಕ್ರಾಂತಿಯ ಸಂದರ್ಭದಲ್ಲಿ ನುಶು ಸಾಹಿತ್ಯವನ್ನು 'ಮಾಟಗಾತಿಯರ ಸೃಷ್ಟಿ' ಎಂದು ಅಪಮಾನಿಸಲಾಯಿತು. ಕಸೂತಿಯಲ್ಲಿ ದಾರದ ಎಳೆಗಳಿಂದ ಮೂಡಿದ ಹಲವು ಆಕೃತಿಯಾಕಾರದ ಈ ಅಕ್ಷರಗಳನ್ನು ಅನುಮಾನದಿಂದ ನೋಡಲಾಯಿತು. ನಾಶ ಪಡಿಸುವ ಪ್ರಯತ್ನಗಳೂ ನಡೆದವು. ಇದೇ ಸಂದರ್ಭದಲ್ಲಿ ಅಕ್ಕತಂಗಿಯರ ಪರಂಪರೆಯ ಕೊನೆಯ ಕೊಂಡಿಯಾದ ಹನಾನ್ ಪ್ರಾಂತದ ಯಾಂಗ್ ಹೌನಿ 2004ರಲ್ಲಿ ತೀರಿಹೋದಳು.

ಅದೃಷ್ಟವಶಾತ್ ಈ ಪರಂಪರೆ ಚೀನಾದ ಚಲನಚಿತ್ರ ನಿರ್ದೇಶಕ ಟಾನ್ ಡನ್ ಕಣ್ಣಿಗೆ ಬಿತ್ತು. ಆತ 'ಕ್ರೌಚಿಂಗ್ ಟೈಗರ್, ಹಿಡನ್ ಡ್ರಾಗನ್' ಸಿನಿಮಾ ಮಾಡಿದ. ಸುಮಾರು ಮುನ್ನೂರು ಗಂಟೆಗಳ ಕಾಲದ ಚಿತ್ರೀಕರಣ ನಡೆಸಿದ. ಮರೆಯಾಗುತ್ತಿದ್ದ ಈ ಸಂಸ್ಕೃತಿಯನ್ನು **'Nu Shu The Secret Song of women'** ಎನ್ನುವ ಸಂಗೀತ ಸಂಯೋಜನೆ ಪ್ರಧಾನವಾದ ಚಲನಚಿತ್ರವನ್ನು ಸಿದ್ಧಪಡಿಸಿದ್ದಾನೆ.

ಕೊನೆಯುಸಿರು ಎಳೆಯುತ್ತಿರುವ ಈ ಲಿಪಿ ಮತ್ತು ಅದರ ಸಾಹಿತ್ಯವನ್ನು ಮುಂದಿನ ಜನಾಂಗಕ್ಕೆ ಉಳಿಸಿಡುವ ಪ್ರಯತ್ನವನ್ನು ಅಲ್ಲಿನ ವಿದ್ವಾಂಸರು ನಡೆಸುತ್ತಿದ್ದಾರೆ. 2006ರಲ್ಲಿ ಚೀನೀ ನ್ಯಾಷನಲ್ ರಿಜಿಸ್ಟರ್ ಆಫ್ ಡಾಕ್ಯುಮೆಂಟರಿ ಹೆರಿಟೇಜ್‌ಗೆ ನುಶು ಸಂಸ್ಕೃತಿಯನ್ನು ಸೇರಿಸಿ ವಸ್ತು ಸಂಗ್ರಾಹಾಲಯವನ್ನು ಸ್ಥಾಪಿಸಲಾಗಿದೆ. ಈ ಮರೆವೆಗೆ ಒಳಗಾಗಿದ್ದ **Sworn sisters** ಕೂಟವನ್ನು ಬೆಳಕಿಗೆ ತರುವುದರ ಮೂಲಕ ಸ್ತ್ರೀವಾದದ ಚರಿತ್ರೆಗೆ ಹೊಸ ಭಾಷ್ಯವೊಂದನ್ನು ಬರೆಯಲಾಗುತ್ತಿದೆ.

■ **ಅಮೃತಮತಿ**

## ಮಾತೇ ಮುತ್ತು

- ಆಧ್ಯಾತ್ಮಿಕ ಜೀವನದಲ್ಲಿ ಪವಾಡ ಎಂಬುದು ಒಂದು ದೊಡ್ಡ ಆತಂಕ.

—ಸ್ವಾಮಿ ವಿವೇಕಾನಂದ

- ಈ ಜಗತ್ತೆನ್ನುವುದು ನಮ್ಮನ್ನು ನಾವು ಗಟ್ಟಿಗೊಳಿಸಲೆಂದಿರುವ ವ್ಯಾಯಾಮ ಶಾಲೆ.

—ಸ್ವಾಮಿ ವಿವೇಕಾನಂದ

- ಲೋಕದಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಅನುಭವಗಳಿವೆ. ಅವುಗಳಲ್ಲಿ ಕೆಲವು ಗ್ರಾಹ್ಯ, ಕೆಲವು ತ್ಯಾಜ್ಯ ಎಂದು ನಿರ್ಧಾರ ಮಾಡುವ ಒರೆಗಲ್ಲು ಅವರವರ ಸ್ವಂತ ಅನುಭವವೇ.

—ಜಿ.ಪಿ. ರಾಜರತ್ನಂ.

- ತನ್ನನ್ನು ತಾನು ಗುರುತಿಸಿಕೊಂಡು, ತನ್ನ ಶಕ್ತಿಯ ಪರಿಮಿತಿ ಅರಿತು, ತನ್ನ ತನದ ವೈಶಿಷ್ಟ್ಯವನ್ನು ಬೆಳೆಸಿಕೊಳ್ಳುತ್ತಾ ಉಳಿದವರ ಜೊತೆಗೆ ಸಮಭಾವದಿಂದ ಸಹಕರಿಸಲು ಕಲಿಸುವುದೇ ನಿಜವಾದ ಸಂಸ್ಕೃತಿಯ ಲಕ್ಷಣ.

—ಎಂ.ಗೋಪಾಲಕೃಷ್ಣ ಅಡಿಗ.